# ದಕ್ಷಿಣ ಕನ್ನಡ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನಡವಳಿಗಳು

ವಿಷಯ: ಜವಾನ ಹುದ್ದೆಯ ನೇಮಕಾತಿಯ ಅಧಿಸೂಚನೆಯ ಅಂತಿಮ ದಿನಾಂಕವನ್ನು ವಿಸ್ತರಿಸಿರುವ ಬಗ್ಗೆ

ಉಲ್ಲೇಖ: 1. ಈ ಕಚೇರಿಯ ಅಧಿಸೂಚನೆ ಸಂಖ್ಯೆ ಎಡಿಎಂಎನ್/5294/2021 ದಿನಾಂಕ: 05.04.2021.

2. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ RD 158 TNR 2020 ದಿನಾಂಕ 26.04.2021
3. ಕರ್ನಾಟಕ ರಾಜ್ಯ ಸರ್ಕಾರದ ಆದೇಶ ಸಂಖ್ಯೆ RD 158 TNR 2020 ದಿನಾಂಕ 07.05.2021
4. ಕಚೇರಿ ಟಿಪ್ಪಣಿಯ ಮೇಲಿನ ಆದೇಶ ದಿನಾಂಕ 20.05.2021

## ಆದೇಶ ಸಂಖ್ಯೆ ಆಡಳಿತ 6586 /2021 ದಿನಾಂಕ 20.05.2021

ಈ ಘಟಕದ ವಿವಿಧ ನ್ಯಾಯಾಲಯಗಳಲ್ಲಿ ಖಾಲಿ ಇರುವ ಜವಾನ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಈಗಾಗಲೇ ಉಲ್ಲೇಖ 1 ರ ಅನ್ವಯ ಅಧಿಸೂಚನೆಯನ್ನು ಹೊರಡಿಸಲಾಗಿದ್ದು ದಿನಾಂಕ 19.04.2021 ರಿಂದ 25.05.2021 ರವರೆಗೆ ಅರ್ಜಿ ಸಲ್ಲಿಸಲು ಹಾಗೂ ದಿನಾಂಕ 28.05.2021 ರವರೆಗೆ ಬ್ಯಾಂಕಿನಲ್ಲಿ ಚಲನ್ ಮುಖಾಂತರ ಶುಲ್ಕ ಪಾವತಿಸಲು ಅಂತಿಮ ದಿನಾಂಕವನ್ನು ನಿಗದಿಪಡಿಸಲಾಗಿತ್ತು.

ಮುಂದುವರೆದು ಉಲ್ಲೇಖ 2 ಮತ್ತು 3 ರನ್ವಯ ಕರ್ನಾಟಕ ಸರ್ಕಾರವು ಕೊವಿಡ್-19 ಹರಡುವಿಕೆಯ ಕಾರಣದಿಂದ ದಿನಾಂಕ 27.04.2021 ರಿಂದ 24.05.2021 ರವರೆಗೆ ಅಗತ್ಯ ಸೇವೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಸೇವೆಗಳನ್ನು ರದ್ದು ಮಾಡಿರುವುದರಿಂದ ಅಭ್ಯರ್ಥಿಗಳಿಗೆ ಅರ್ಜಿ ಸಲ್ಲಿಸಲು ಅನಾನುಕೂಲವಾಗಿರುತ್ತದೆ.

ಈ ಕಾರಣಗಳಿಂದ ಈ ಮೊದಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳನ್ನು ಹೊರತುಪಡಿಸಿ ಹೊಸ ಅಭ್ಯರ್ಥಿಗಳಿಗೆ ಅನುಕೂಲವಾಗುವಂತೆ ದಿನಾಂಕ 03.07.2021 ರವರೆಗೆ ಅರ್ಜಿ ಸಲ್ಲಿಸಲು ಹಾಗೂ ದಿನಾಂಕ 07.07.2021 ರವರೆಗೆ ಬ್ಯಾಂಕಿನಲ್ಲಿ ಚಲನ್ ಮುಖಾಂತರ ಶುಲ್ಕ ಪಾವತಿಸಲು ಅಂತಿಮ ದಿನಾಂಕವನ್ನು ವಿಸ್ತರಿಸಲಾಗಿದೆ.

(ಮುರಲಿಧರ ಪೈ ಬಿ.)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದ.ಕ. ಮಂಗಳೂರು.

ಪ್ರತಿಯನ್ನು ಮಾನ್ಯ ಮಹಾವಿಲೇಖಾನಧಿಕಾರಿ, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು ರವರಿಗೆ ಮುಖಪತ್ರದೊಂದಿಗೆ ಮಾಹಿತಿಗಾಗಿ ಸಲ್ಲಿಸಿದೆ.

ಪ್ರತಿಯನ್ನುಃ

1. ಪ್ರಧಾನ ನಗರ ವ್ಯವಹಾರ ಮತ್ತು ಸೆಷನ್ಸ್ ನ್ಯಾಯಾಧೀಶರು, ಬೆಂಗಳೂರು ನಗರ ಹಾಗೂ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಬೀದರ್, ಬಿಜಾಪುರ, ಚಾಮರಾಜನಗರ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಗದಗ, ಗುಲ್ಬರ್ಗಾ, ಹಾಸನ, ಹಾವೇರಿ, ಕಾರವಾರ, ಕೊಡಗು, ಕೋಲಾರ, ಕೊಪ್ಪಳ, ಮಂಡ್ಯ, ಮೈಸೂರು, ರಾಯಚೂರು, ರಾಮನಗರ, ಶಿವಮೊಗ್ಗ, ತುಮಕೂರು, ಉಡುಪಿ, ಯಾದಗಿರಿ ಇವರಿಗೆ ಮಾಹಿತಿ ಮತ್ತು ವ್ಯಾಪಕ ಪ್ರಚಾರಕ್ಕಾಗಿ.
2. ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳ ಪೀಠಾಸೀನಾಧಿಕಾರಿಗಳಿಗೆ (ಸೂಚನಾ ಫಲಕದಲ್ಲಿ ಪ್ರಕಟಿಸಲು).
3. ವಾರ್ತಾಧಿಕಾರಿ, ವಾರ್ತಾ ಇಲಾಖೆ, ಮಂಗಳೂರು, ಇವರಿಗೆ ವ್ಯಾಪಕ ಪ್ರಚಾರಕ್ಕಾಗಿ.
4. ಈ ನ್ಯಾಯಾಲಯದ ಸೂಚನಾಫಲಕಕ್ಕಾಗಿ.